ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತಿನ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ / DATE: 21/02/2020

# ಸರಕಾರಕ್ಕೆ ಕಿವಿ ಹಿಂಡಿದ ಬಸವರಾಜ ಹೊರಟ್ಟಿ

21/2/2020

**ವಿಧಾನಪರಿಷತ್:** ಗೌರವಯುತ ಭಾಷಣ, ಮಾತು, ಚರ್ಚೆಗೆ ಮೇಲ್ಪನೆ ಪಾತ್ರವಾಗುತ್ತದೆ ಎನ್ನುವುದಕ್ಕೆ ಜೆಡಿಎಸ್ ಸದಸ್ಯ ಬಸವರಾಜ ಹೊರಟ್ಟಿ ಮಾತು ಮತ್ತೊಮ್ಮೆ ಸಾಕ್ಷಿಯಾಯಿತು. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಆಡಿ ಮಾತನಾಡಿದ ಜೆಡಿಎಸ್ ಹಿರಿಯ ಸದಸ್ಯ ಬಸವರಾಜ ಹೊರಟ್ಟಿ ತಮ್ಮ ಅನುಭವದ ಪ್ರಬುದ್ಧತೆಯ ಪ್ರದರ್ಶನ ಮಾಡಿದರು.

ರಾಜ್ಯದಲ್ಲಿ ಕ್ಯಾನ್ಸರ್‌ಗೆ ಪ್ರತಿವರ್ಷ ಲಕ್ಷ ಮಂದಿ ಮೃತಪಡುತ್ತಾರೆ. ಆಸ್ಪತ್ರೆಗಳಲ್ಲಿ ಸೂಕ್ತ ಚಿಕಿತ್ಸೆ ಇಲ್ಲ. ಇದರತ್ತ ಸರಕಾರ ಗಮನ ಹರಿಸಬೇಕು. ಉತ್ತರ ಕರ್ನಾಟಕ ಭಾಗದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಆಗಿಲ್ಲ. ಸುವರ್ಣ ವಿಧಾನಸೌಧದಲ್ಲಿ ಏನೂ ಬಳಕೆ ಆಗುತ್ತಿಲ್ಲ. 500 ಕೋಟಿ ರು. ಇಲ್ಲಿವರೆಗೆ ಖರ್ಚು ಮಾಡಲಾಗಿದೆ. ಆದರೆ ಪ್ರಯೋಜನ ಏನು? ಆರಂಭದಿಂದ ಇದುವರೆಗೆ ಕೇವಲ 70 ದಿನ ಮಾತ್ರ ಬಳಸಲಾಗಿದೆ. ಗೋಡೌನ್ ತರ ಬಳಸಲಾಗುತ್ತಿದೆ. ಮನಸ್ಸಿಗೆ ಬಂದಂತೆ ನಿರ್ಮಿಸಲಾಗಿದೆ. ಸಾಕಷ್ಟು ಭ್ರಷ್ಟಾಚಾರ ಆಗಿದೆ ಎಂದರು. ಸುವರ್ಣ ವಿಧಾನಸೌಧ ಕಟ್ಟಲಾಗಿದೆ ಅಷ್ಟೇ, ಆಮೇಲೆ ಏನೂ ಆಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಉತ್ತರ ಕರ್ನಾಟಕ ಭಾಗಕ್ಕೆ ಸಚಿವ ಸ್ಥಾನ ನೀಡಿಕೆಯಲ್ಲಿ ಅನ್ಯಾಯವಾಗಿದೆ. ಮಹದಾಯಿ, ನಂಜುಂಡಪ್ಪ ವರದಿ, ಶಿಕ್ಷಣ ಬಗ್ಗೆ ಚಕಾರ ಎತ್ತಿಲ್ಲ. ಮಹಾರಾಷ್ಟ್ರದಲ್ಲಿ ಹೊಸ ಸರಕಾರ ಬಂದಿದೆ, ಅದರ ನಂತರ ಮುನ್ನೆಚ್ಚರಿಕೆ ಕ್ರಮ ಬೆಳಗಾವಿ ಭಾಗದಲ್ಲಿ ಮಾಡಿಲ್ಲ. 17 ಮಂದಿ ಬಂದಿದ್ದರಿಂದ ಸರಕಾರ ರಚಿಸಿದ್ರಿ. ಅವರ ಬಾಯಲ್ಲಿ ಹೇಳಿಸಿದ್ದೀರಿ. ಅವರು ಬಂದು ಸಚಿವರಾದ್ರು, ನಾಲ್ಕು ಟರ್ಮ್ ಆಯ್ಕೆಯಾದ ನಿಮ್ಮವರು ಸಚಿವರಾಗಿಲ್ಲ. ನೀವು ಬಂದು ಆಪರೇಷನ್ ಕಮಲ ಮಾಡಿದಿರಿ. ನಮ್ಮ ಕಡೆ ಇದ್ದ ಹೋಲೆಗೇಡಿ ಅಂತೀವಿ. ಅದನ್ನು ಮಾಡಿದಿರಿ. ಯಾವಾಗ ನೀವು ಬದಲಾಗ್ತೀರಿ ಎಂದು ಪ್ರಶ್ನಿಸಿದರು. ದೇಶದಲ್ಲಿ ಮೂರ್ನಾಲ್ಕು ಪಕ್ಷ ಇವೆ. ಕಾಂಗ್ರೆಸ್ 132 ವರ್ಷ ಹಳೆಯದು. 73 ವರ್ಷದಲ್ಲಿ 54 ವರ್ಷ ಕಾಂಗ್ರೆಸ್ ಅಧಿಕಾರ ನಡೆಸಿದೆ. ಆರು ಸಾರಿ ಪೂರ್ಣ ಪ್ರಮಾಣದ ಅಧಿಕಾರದಲ್ಲಿತ್ತು. ಮೂರು ಸಾರಿ ಮೈತ್ರಿ ಸರಕಾರ ಮಾಡಿದ್ದವು. ಬಿಜೆಪಿ ಜನಸಂಘದ ಮೂಲಕ ಬಂತು. ಅಂದು ಅಡ್ವಾಣಿ, ವಾಜಪೇಯಿ ನೀಡಿದ ಕೊಡುಗೆಯನ್ನು ನೀವು ಸ್ಮರಿಸುತ್ತಿಲ್ಲ ಎಂದು ಹೇಳಿದರು.



ವಿಧಾನಪರಿಷತ್‌ನಲ್ಲಿ ಗೃಹಸಚಿವ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್. ಅಶೋಕ ಹಾಗೂ ಸಂಸದೀಯ ಸಚಿವ ಮಾಧುಸ್ವಾಮಿ ಅವರು ಚರ್ಚಿಸುತ್ತಿರುವುದು.